KAMD720003892025



<u>ಪ್ರಧಾನ **ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ ದಂಡಾಧಿಕಾರಿಗಳವರ ನ್ಯಾಯಾಲಯ, ಶ್ರೀರಂಗಪಟ್ಟಣ**</u>

**ಸಿ.ಸಿ. 235/2025**

ಫಿರ್ಯಾದಿಃ ಆರ್.ಶ್ರೀನಿವಾಸ ಬಿನ್ ರಾಮು, 43 ವರ್ಷ,
ವಾಸಃ ಗೆಂಡೆಹೊಸಹಳ್ಳಿ ಗ್ರಾಮ, ಅರಕೆರೆ ಹೋಬಳಿ,
ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.

-ವಿರುದ್ಧ-

ಆರೋಪಿಃ ಸ್ವಾಮಿ ಬಿನ್ ಲೇಟ್ ಚಿಕ್ಕಾರಾಜಾಚಾರ್, 42 ವರ್ಷ,
ವಾಸಃ ಗೆಂಡೆಹೊಸಹಳ್ಳಿ ಗ್ರಾಮ, ಅರಕೆರೆ ಹೋಬಳಿ,
ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.

ನಾನು **ಶ್ರೀ ಉಮೇಶ. ಎಮ್.ಪಿ. ಬಿ.ಎ.ಎಲ್., ಎಲ್.ಎಲ್.ಬಿ.,** ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಶ್ರೀರಂಗಪಟ್ಟಣ ಆದ ನಾನು, ಆರೋಪಿತನಾದ ನಿನ್ನ ಮೇಲೆ ಈ ಕೆಳಗಿನಂತೆ ಆರೋಪ ಹೊರಿಸುತ್ತಿದ್ದೇನೆ.

**<u>ಆಪಾದನೆ</u>**

ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ಫಿರ್ಯಾದುದಾರರು ಮತ್ತು ಆರೋಪಿತರು ಪರಿಚಯಸ್ಥರಾಗಿದ್ದು, ಆರೋಪಿತನಾದ ನೀನು ದರದು ನಿಮಿತ್ತ ಮತ್ತು ಕುಟುಂಬದ ಕಾನೂನುಬದ್ಧ ಅವಶ್ಯಕತೆಗಾಗಿ ರೂ.2,00,000/- ರೂ. ಸಾಲ ನೀಡುವಂತೆ ಕೋರಿಕೊಂಡಿದ್ದು ಅದರಂತೆ ಜೂನ್ 2024 ರಂದು ರಂದು ರೂ.2,00,000/- ಸಾಲವಾಗಿ ಪಡೆದುಕೊಂಡಿದ್ದು, ಸದರಿಸಾಲವನ್ನು ಆರು ತಿಂಗಳ ನಂತರ ಮರು ಪಾವತಿ ಮಾಡುವುದಾಗಿ ಹೇಳಿದ್ದು , ಅದರಂತೆ ಆರು ತಿಂಗಳ ನಂತರ ಮರುಪಾವತಿಸುವಂತೆ ಕೇಳಿದಾಗ, ಸದರಿ ಹಣದ ಬಾಬ್ತಿಗಾಗಿ ದಿನಾಂಕ 05.12.2024 ರ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಮಂಡ್ಯ ಶಾಖೆಯ ಚೆಕ್ಕಿನ ಸಂಖ್ಯೆ: 063912 ನ ರೂ.2,00,000/- ನ ಚೆಕನ್ನು ನೀಡಿದ್ದು, ತದನಂತರ ಫಿರ್ಯಾದುದಾರರು ಸದರಿ ಚೆಕನ್ನು ನಗದು ಗೊಳಿಸಲು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಅರಕೆರೆ ಶಾಖೆಗೆ ಹಾಕಿದಾಗ ನಿನ್ನ ಖಾತೆಯಲ್ಲಿ ಸಾಕಷ್ಟು ಹಣ ಇರದ ಕಾರಣ ದಿಃ 05.12.2024 ರಂದು "Funds Insufficient" ಎಂಬ ಹಿಂಬರಹದೊಂದಿಗೆ ವಾಪಸ್ ಬಂದಿರುವುದಾಗಿ ಮತ್ತು ಸದರಿ ವಿಷಯವನ್ನು ನಿಮಗೆ ತಿಳಿಸಿ ದಿಃ 30.12.2024 ರಂದು ಅವರ ವಕೀಲರ ಮೂಲಕ ನೋಟಿಸ್ಸು ನೀಡಿ ತಿಳಿಸಿರುವುದಾಗಿ, ಸದರಿ ನೋಟಿಸ್ಸು ದಿನಾಂಕ: 02.01.2025 ರಂದು ನೀನು

ಪಡೆದಿದ್ದರೂ ಸದರಿ ಹಣವನ್ನು ನೀನು ಮರುಪಾವತಿ ಮಾಡದೇ **ನೆಗೋಷ್ಯಬಲ್ ಇನ್ಸ್ಟ್ರುಮೆಂಟ ಆಕ್ಟ್, 138** ರ ಅಡಿಯಲ್ಲಿ ಅಫರಾದ ಎಸುಗಿರುವಿರೆಂದು ನಿನ್ನ ಮೇಲೆ ಆರೋಪಣೆ ಇದೆ ಮತ್ತು ಷದ್ರಿ ಆರೋಪಣೆಯನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀಯಾ ಎಂದು ಆರೋಪಿಸಲಾಗಿದೆ.

ಈ ಮೇಲ್ಕಂಡ ಆರೋಪಣೆಗೆ ನೀನು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸಿರುತ್ತೇನೆ .

ಪ್ರಶ್ನೆಃ 1. ಈಗ ನಿನಗೆ ಮೇಲೆ ಓದಿ ಹೇಳಿ ವಿವರಿಸಿದ ಆರೋಪಣೆ ತಿಳಿಯಿತೆ ?
**ಉತ್ತರಃ**

ಪ್ರಶ್ನೆಃ 2. ನೀನು ಈ ಮೇಲಿನ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ನಿನ್ನ ವಿರುದ್ಧ ವಿಚಾರಣೆ ನಡೆಯಬೇಕೆ?
ಉತ್ತರಃ

ಪ್ರಶ್ನೆಃ 3 ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ–1 ಚೆಕ್ಕಿನ ನಂ 063912 6 ನಿಮ್ಮ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕ್ ಖಾತಾ ನಂ. 3929369915 ಖಾತೆಗೆ ಸಂಬಂಧಿಸಿದ ಚೆಕ್ ಆಗಿರುತ್ತದೆ ಎಂಬುದನ್ನು ಒಪ್ಪಿಕೊಳ್ಳುವಿರಾ?
ಉತ್ತರಃ

ಪ್ರಶ್ನೆಃ 4 ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ–1 ಚೆಕ್ಕಿನ ನಂ 063912 ಮೇಲಿನ ಸಹಿ ನಿಮ್ಮದೇ ಎಂದು ಒಪ್ಪಿಕೊಳ್ಳುವಿರಾ?
ಉತ್ತರಃ

ಪ್ರಶ್ನೆಃ 5 ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ–1 ಚೆಕ್ಕಿನ ನಂ 004156 ನ್ನು ಪಿರ್ಯಾದುದಾರರಿಗೆ ನೀಡಿರುವುದಾಗಿ ನೀವು ಒಪ್ಪಿಕೊಳ್ಳುವಿರಾ?
ಉತ್ತರಃ

ಪ್ರಶ್ನೆಃ 6  ಪಿರ್ಯಾದುದಾರರಿಂದ ಜೂನ್ - 2024 ರಂದು ರೂ.2,00,000/-  ರೂ.ಗಳನ್ನು ಪಡೆದುಕೊಂಡಿರುವಿರಾ?

ಉತ್ತರಃ

ಪ್ರಶ್ನೆಃ 7  ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1  ಚೆಕ್ಕಿನ  ನಂ 063912 ದಿನಾಂಕ 05.12.2024 ರಲ್ಲಿ ನಮೂದಿಸಿದ ರೂ.2,00,000/- ನ್ನು (ಏಳು ಲಕ್ಷ ರೂಪಾಯಿಗಳು ಮಾತ್ರ) ಪಿರ್ಯಾದುದಾರರಿಗೆ  ಪಾವತಿ ಮಾಡುವ ಭಾಧ್ಯತೆಯನ್ನು ನೀವು ಒಪ್ಪಿಕೊಳ್ಳುವಿರಾ?

ಉತ್ತರಃ

ಪ್ರಶ್ನೆಃ 8  ಈ ಹಂತದಲ್ಲಿ ಈ  ಪ್ರಕರಣವನ್ನು ರಾಜೀ ಮಾಡಿಕೊಳ್ಳಲು ಇಚ್ಚಿಸುವಿರಾ?

ಉತ್ತರಃ

ಸದ್ರಿ ಮೇಲಿನ ಆರೋಪಣೆಗಳನ್ನು ತೆರೆದ ನ್ಯಾಯಾಲಯದಲ್ಲಿ ದಿಃ **08-04-2026** ರಂದು ಆರೋಪಿತನಿಗೆ ಓದಿ ಹೇಳಿ, ಕೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**